



**ಗೋಪಿ:** ಹುಡುಗರು ಹಾಗೂ ಹುಡುಗಿಯರ ಮುಖ ತೊಳೆಯುವ ಕ್ರಿಯೆಯಲ್ಲಿ ಇರುವ ವ್ಯತ್ಯಾಸವೇನು ಗೊತ್ತೆ?
**ರಾಮು:** ಗೊತ್ತಿಲ್ಲ, ನೀನೇ ಹೇಳು.
**ಗೋಪಿ:** ಹುಡುಗರು ಮುಖ ತೊಳೆಯುತ್ತಿದ್ದರೆ ಅವರು ಹೊರಗೆ ಹೊರಟಿದ್ದಾರೆ ಎಂದರ್ಥ. ಅದೇ ಹುಡುಗಿಯರು ಮುಖ ತೊಳೆಯುತ್ತಿದ್ದರೆ ಅವರಿಗೆ ಇನ್ನೆಲ್ಲೂ ಹೊರಗೆ ಹೋಗಲಿಕ್ಕಿಲ್ಲ ಎಂದರ್ಥ.




ವಯೋವೃದ್ಧ ಸೊಳ್ಳೆಯೊಂದು ಯುವ ಸೊಳ್ಳೆಗೆ ಉಪದೇಶ ನೀಡುತ್ತಾ ಹೇಳಿತು...
ನಿಮಗೇನು ತಿಳಿದಿದೆ ಸಂಘರ್ಷವೆಂದರೇನೆಂದು. ನಮ್ಮ ಕಾಲದಲ್ಲಿ ಮಹಿಳೆಯರನ್ನು ಕಚ್ಚಲು ಒಂದಿಂಚು ಜಾಗವೂ ಸಿಗುತ್ತಿರಲಿಲ್ಲ.

**ಡಾಕ್ಟರ್:** ಶಸ್ತ್ರಚಿಕಿತ್ಸೆಯ ಬಳಿಕ ನೀವು ನಿಮ್ಮ ಮನೆಗೆ ನಡೆದುಕೊಂಡು ಹೋಗಬಲ್ಲಿರಿ ಎಂಬ ಗ್ಯಾರಂಟಿ ನಾನು ನೀಡುತ್ತೇನೆ.
**ರೋಗಿ:** ಅಂದರೆ ನನ್ನ ಬಳಿ ಆಟೋರಿಕ್ಷಾಕ್ಕೂ ಹಣ ಉಳಿಯುವುದಿಲ್ಲವೆ?

ತುಂಡು ಬಟ್ಟೆ ತೊಟ್ಟು ಹೊರಗೆ ಹೋಗಲು ಅನುವಾಗಿದ್ದ ಹೆಂಡತಿಗೆ ಪತಿ ಹೇಳಿದ, 'ನೀನು ಮದುವೆಯ ನಂತರ ತುಂಬಾ ಫ್ಯಾಷನ್ ಮಾಡಲಾರಂಭಿಸಿರುವೆ'.
ಹೆಂಡತಿ ಸ್ಪಷ್ಟೀಕರಿಸಿದಳು, 'ಹೌದು, ಫ್ಯಾಷನ್ ಏನಿದ್ದರೂ ಮದುವೆಯ ನಂತರ ನಿನ್ನ ಗಂಡನ ಸಂಪಾದನೆಯಲ್ಲಿ ಮಾಡಿಕೊ ಅಂತ ನನ್ನಪ್ಪ ಮದುವೆಗೂ ಮೊದಲೇ ಹೇಳಿದ್ದರು.

ಗೋಪಿ ತುಂಬಾ ಹೊತ್ತಿನಿಂದ ತನ್ನ ಮನೆಯ ಹಾಲ್‌ನಲ್ಲಿ ಅದೇನೋ ಹುಡುಕಾಡುತ್ತಿದ್ದ.
**ಪತ್ನಿ:** ಅಷ್ಟೊತ್ತಿನಿಂದ ಅದೇನ್ ಹುಡುಕ್ತಾ ಇದ್ದೀರಾ?
**ಗೋಪಿ:** ಹಿಡನ್ ಕ್ಯಾಮೆರಾ.
**ಪತ್ನಿ:** ನಮ್ಮನೇಲಿ ಯಾರ್‍ರಿ ಹಿಡನ್ ಕ್ಯಾಮೆರಾ ಇಡ್ತಾರೆ. ಯಾಕ್ರೀ ನಿಮ್ಗೆ ಹಾಗನ್ನಿಸುತ್ತಿದೆ?
**ಗೋಪಿ:** ನಮ್ಮ ಮನೆಯಲ್ಲಿ ಹಿಡನ್ ಕ್ಯಾಮೆರಾ ಇಲ್ಲಾಂದ್ರೆ ಟಿವಿಯಲ್ಲಿ ವಾರ್ತೆ ಓದುತ್ತಿರುವ ಆ ಮನುಷ್ಯನಿಗೆ ಹೇಗೆ ಗೊತ್ತು ನಾವು ಆಜ್ ತಕ್ ಚಾನಲ್ ನೋಡುತ್ತಿದ್ದೇವೆಂದು? ಪದೇ ಪದೇ 'ನೀವು ನೋಡುತ್ತಿದ್ದೀರಿ. ಆಜ್ ತಕ್ ಚಾನಲ್' ಎಂದು ಅಷ್ಟು ನಿಖರವಾಗಿ ಹೇಳಲು ಹೇಗೆ ಸಾಧ್ಯ?

**ಸ್ಕೂಲ್ ಮೇಟ್ 1:** ಹಾಯ್ ಡ್ಯೂಡ್ ನಿಂಗೊಂದು ವಿಷಯ ಗೊತ್ತಾ. ಇಲ್ಲಿ ಇಬ್ರು ಬ್ರೋ...ಸ್ ಅಕ್ಕಪಕ್ಕಾನೆ ಇರ್ತಾರೆ, ಆದ್ರೂ ಒಬ್ರು ಇನ್ನೊಬ್ರನ್ನ ನೋಡಲ್ಲ.
**ಸ್ಕೂಲ್ ಮೇಟ್ 2:** ಹೌದಾ, ಯಾರು ಕಣೋ ಅಂಥವರು?
**ಸ್ಕೂಲ್ ಮೇಟ್ 1:** ಐ ಬ್ರೋ...ಸ್!

ಗೆಳೆಯರಿಬ್ಬರು ಬೈಕಿನಲ್ಲಿ ಪ್ರಯಾಣ ಹೊರಟಿದ್ದರು. ರಾತ್ರಿಯಾಯಿತು. ಒಂದೆಡೆ ಟೆಂಟ್ ಹಾಕಿ ಮಲಗಿದರು. ನಡುರಾತ್ರಿ ಒಬ್ಬಾತನಿಗೆ ಎಚ್ಚರವಾಯಿತು. ಆತ ಇನ್ನೊಬ್ಬನನ್ನು ಎಬ್ಬಿಸಿ, 'ಮೇಲೆ ನಿನಗೇನು ಕಾಣಿಸುತ್ತಿದೆ' ಎಂದು ಕೇಳಿದ. 'ಆಕಾಶ ಮತ್ತು ಅಸಂಖ್ಯಾತ ನಕ್ಷತ್ರಗಳು' ಎಂದು ಆತ ಉತ್ತರಿಸಿದ. 'ಇದರಿಂದ ನಮಗೇನು ತಿಳಿಯುತ್ತದೆ' ಎಂದು ಮೊದಲನೆಯವ ಪುನಃ ಕೇಳಿದ. ಅದಕ್ಕೆ ಎರಡನೆಯವನು 'ಆಕಾಶ ಅದೆಷ್ಟು ಸುಂದರವಾಗಿದೆ' ಎಂದ. ಕೋಪಗೊಂಡ ಮೊದಲನೆಯವ, 'ಅಯ್ಯೋ ಕವಿ ಮಹಾಶಯ, ನಮ್ಮ ಟೆಂಟ್ ಕಳುವಾಗಿದೆ'.

**ಜಿಪುಣ:** ಹಣ ಸಂಪಾದನೆಯ ಸುಲಭ ಮಾರ್ಗ ಸೂಚಿಸಿ ಸ್ವಾಮೀಜಿ.
**ಸ್ವಾಮೀಜಿ:** ಚಿಂತಿಸದಿರು ಕಂದಾ, ನಿನಗೊಂದು ಮಂತ್ರ ಪಾಠ ಮಾಡುತ್ತೇನೆ. ಅದನ್ನು ಪಠಿಸಿದಷ್ಟು ಬಾರಿಯೂ ನಿನಗೆ ಧನ ಪ್ರಾಪ್ತಿಯಾಗುತ್ತದೆ.
**ಜಿಪುಣ:** ದಯವಿಟ್ಟು ಶೀಘ್ರ ತಿಳಿಸಿ ಸ್ವಾಮಿ, ಅದೆಷ್ಟು ಕಠಿಣವಿದ್ದರೂ ಪಠಿಸುತ್ತೇನೆ.
**ಸ್ವಾಮೀಜಿ:** ಪ್ರತಿ ದಿನ ಯಾವುದಾದರೂ ಮಂದಿರದ ಎದುರಲ್ಲಿ ನಿಂತು ಭಕ್ತರನ್ನು ಕಂಡಾಕ್ಷಣ, 'ದೇವರ ಹೆಸರಲ್ಲಿ ಏನಾದರೂ ಕೊಡಿ ಸ್ವಾಮಿ' ಎನ್ನುತ್ತಾ ಕೈಮುಂದು ಮಾಡು.

**ಪ್ರೊಫೆಸರ್:** ಐದರ ನಡುವೆ ನಾಲ್ಕು ಬರೆದು ತೋರಿಸು.
**ಚೀನಿ ಮಿತ್ರ:** ತಮಾಷೆ ಮಾಡಬೇಡ.
**ಜಪಾನಿ ಮಿತ್ರ:** ಸಾಧ್ಯವಿಲ್ಲ.
**ಅಮೆರಿಕನ್ ಮಿತ್ರ:** ಪ್ರಶ್ನೆ ಸರಿಯಿಲ್ಲ.
**ಬ್ರಿಟಿಷ್ ಮಿತ್ರ:** ನೆಟ್‌ನಲ್ಲೂ ಸಿಗುತ್ತಿಲ್ಲ.
ಭಾರತೀಯ ಮಿತ್ರ: ತುಂಬಾ ಸುಲಭ F(IV)E ಎಂದು ಬರೆದರಾಯಿತು.

ಸಂಗ್ರಹ: ರಮಣ್ ಶೆಟ್ಟಿ ರೆಂಜಾಳ್, ಮುಂಬೈ